ಆ) ಶಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಅನುಕ್ರಮವಾಗಿ 1,656 ಮತ್ತು 1,772 ರೈತರಿಗೆ ಪರಿಹಾರ ನೀಡಲಾಗಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ : ಈ ಪರಿಹಾರ ಕೊಡುವ ಟೈಮ್‌ನಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. ಕೆಲವು ರೈತರಿಗೆ ಸರಿಯಾದ ಪರಿಹಾರ ಸಿಕ್ಕಿಲ್ಲ, ಪುನಃ ಯಾರಾದರೂ ಅರ್ಜಿ ತೆಗೆದುಕೊಂಡು ಬಂದರೆ ಅವರಿಗೆ ಸಹಾಯ ಮಾಡುತ್ತೀರಾ? ಶಿರಸಿ, ಮತ್ತು ಸಿದ್ದಾಪುರ ತಾಲ್ಲೂಕಿನಲ್ಲಿ ಮಳೆ ಹಾನಿಯಿಂದ ಪರಿಹಾರ ಕೊಡುವಾಗ ಸ್ವಲ್ಪ ವ್ಯತ್ಯಾಸ ಆಗಿದೆ. ಕೆಲವು ಮಂದಿ ಹೆಸರು ತಪ್ಪಿದೆ. ಅವರು ಅರ್ಜಿ ಕೊಡುತ್ತಿದ್ದಾರೆ, ತಾವು ಏನಾದರೂ ಸಹಾಯ ಮಾಡುತ್ತೀರಾ?

ಶ್ರೀ ಎಂ. ರಾಜಶೇಖರ ಮೂರ್ತಿ : ಯಾರು ಯಾರಿಗೆ ತೊಂದರೆಯಾಗಿದೆ ಪರಿಹಾರ ಸಿಕ್ಕಿಲ್ಲ ಅವರು ಏನಾದರೂ ಸಿಕ್ಕಿಲ್ಲ ಎಂದು ಅಪ್ಲಿಕೇಷನ್ ಕೊಟ್ಟರೆ ಅದನ್ನು ಕನ್ಸಿಡರ್ ಮಾಡುತ್ತೇವೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಈ ವಿಚಾರದಲ್ಲಿ ಧಾರವಾಡ ಜಿಲ್ಲೆಗೆ ಹಣ ಕೊಟ್ಟಿಲ್ಲ, ಡಿ.ಸಿ. ಅವರು ಗ್ರಾಂಟ್ಸ್ ಇಲ್ಲ ಎಂದು ಹೇಳುತಿದ್ದಾರೆ. ಬೆಳೆ ಹಾನಿ ಏನಾಯಿತು ಅದರಲ್ಲಿ ಧಾರವಾಡ ಜಿಲ್ಲೆಗೆ ಒಂದು ಪೈಸೆ ಕೊಟ್ಟಿಲ್ಲ. ಡಿ.ಸಿ.ಯವರನ್ನು ಕೇಳಿದರೆ ದುಡ್ಡಿಲ್ಲ ಎಂದು ಹೇಳುತ್ತಾರೆ, ತಾವು ದಯವಿಟ್ಟು ಇದರ ಬಗ್ಗೆ ಸದನಕ್ಕೆ ತಿಳಿಸಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ : ಡಿ ಸಿ ಯವರು ದುಡ್ಡು ಬೇಕೆಂದು ನಮಗೆ ಹೇಳಿದರೆ ಅವರಿಗೆ ದುಡ್ಡು ಕೊಡುತ್ತೇವೆ.

ಶಿರಾ ತಾಲ್ಲೂಕು ಬ್ರಹ್ಮಸಂದ್ರ ಗೇಟು ಬಳಿ ಉಪಕೃಷಿ ಮಾರುಕಟ್ಟೆಯ ಸ್ಥಾಪನೆ

596 - ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿರಾ ತಾಲ್ಲೂಕು, ಬ್ರಹ್ಮಸಂದ್ರ ಗೇಟಿನ ಬಳಿ ಉಪ-ವ್ಯವಸಾಯೋತ್ಪನ್ನ ಮಾರುಕಟ್ಟೆಯ ಅವಶ್ಯಕತೆಯಿದ್ದು ಅದನ್ನು ಸ್ಥಾಪಿಸಲು ಸಾರ್ವಜನಿಕರಿಂದ ಮತ್ತು ಶಾಸಕರಿಂದ ಮನವಿಗಳು ಬಂದಿರುವುದು ಸರ್ಕಾರಕ್ಕೆ ತಿಳಿದಿದೆಯೆ;

ಆ) ಹಾಗಿದ್ದಲ್ಲಿ ಮಾರುಕಟ್ಟೆಯನ್ನು ಸ್ಥಾಪಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಹೌದು

ಆ) ಇದರ ಸಾಧ್ಯ ಸಾಧ್ಯತೆಯನ್ನು ಪರಿಶೀಲಿಸಲಾಗುವುದು.

ಶ್ರೀ ಟಿ.ಬಿ. ಜಯಚಂದ್ರ : ನನ್ನ ಪ್ರಶ್ನೆಗೆ ಹೌದು ಎಂದು ಉತ್ತರ ಕೊಟ್ಟಿದ್ದೀರಿ. ಇನ್ನೊಂದಕ್ಕೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಅರ್ಜಿ ಬಂದಿರುವುದು ಯಾವಾಗ ಸರಕಾರಕ್ಕೆ ಶಾಸಕರಿಂದ ಅಥವಾ ಸಾರ್ವಜನಿಕರಿಂದ ಬಂದಾಗ ಅದನ್ನು ಪರಿಶೀಲನೆ ಮಾಡಿ ಅಂತಿಮ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಎಷ್ಟುದಿನ ಬೇಕೆಂದು ಸಚಿವರು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, vide representation dt. 28.9.1991 there has been a request for the establishment of sub-market either at Kallambella or Brahmasandra gate in Sira Taluk for orderly marketing the agricultural produce grown at Bakkapatna, Kallambella.

90-91ರಲ್ಲಿ ಅರ್ಜಿ ಬಂದಿದೆ. ಅದರ ಸರ್ವೆ ರಿಪೋರ್ಟ್ ನಾವು ಈಗಾಗಲೇ ತರಿಸಿದ್ದೇವೆ. ಸರ್ವೆ ರಿಪೋರ್ಟ್ ಪ್ರಕಾರ ಕಳ್ಳಂಬೆಳ್ಳದಲ್ಲಿ ಸಬ್ ಮಾರ್ಕೆಟ್ ಯಾರ್ಡ್ ಮಾಡಬಹುದೆಂದು ಇದೆ. ಅದರೆ ತಾವು ಬ್ರಹ್ಮಸಂದ್ರ ಗೇಟ್ ಹತ್ತಿರ ಮಾಡಬೇಕೆಂದು ಕೇಳುತ್ತಿದ್ದೀರಿ. ಅಲ್ಲಿ ಸಂತೆ ಮಾಡಬಹುದು, ಸಬ್‌ಮಾರ್ಕೆಟ್ ಯಾರ್ಡ್ ಮಾಡುವುದಕ್ಕೆ ಫೆಸಿಲಿಟೀಸ್ ಇಲ್ಲ. ಏತಕ್ಕೆಂದರೆ ಪೊಲೀಸ್ ಸ್ಟೇಷನ್, ಹೈಸ್ಕೂಲ್, ಕೆ.ಇ.ಬಿ. ಆಫೀಸ್, ಕೆನರಾಬ್ಯಾಂಕ್, ಪ್ರಾಥಮಿಕ ಆರೋಗ್ಯ ಕೇಂದ್ರ. ಪಶುವೈದ್ಯಶಾಲೆ ಇವೆಲ್ಲ ವ್ಯವಸ್ಥೆ ಇರತಕ್ಕಂಥಾದ್ದು ಕಳ್ಳಂಬೆಳ್ಳದ ಹತ್ತಿರ. ಅದಕ್ಕೆ ಇದನ್ನು ಅಲ್ಲಿ ಮಾಡ ತಕ್ಕದ್ದು ಸೂಕ್ತ ಎಂಬ ಮಾತನ್ನು ನಮ್ಮ ಅಧಿಕಾರಿಗಳು ಹೇಳುತ್ತಿದ್ದಾರೆ. ಈಗ ಏನು ರಿಪೋರ್ಟ್ ಬಂದಿದೆ ಅದರ ಆಧಾರದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಈಗ ಕಳ್ಳಂಬೆಳ್ಳಕ್ಕೆ ಸೂಕ್ತವಾದಂಥ ಜಾಗ ಎಂದು ಹೇಳಿ ತಾವು ತೀರ್ಮಾನ ಮಾಡಿರುವುದರಲ್ಲಿ ನನ್ನ ಆಭ್ಯಂತರ ಏನೂ ಇಲ್ಲ. ಅದು ಸೂಕ್ತವಾಗಿರತಕ್ಕಂಥಾದ್ದು. ಆದರೆ ನನ್ನ ತೊಂದರೆ ಏನು ಅಂದರೆ ಬ್ರಹ್ಮಸಂದ್ರ ಗೇಟಿನಲ್ಲಿ ಮಾಡಿದಾಗ ಸಾಕಷ್ಟು ಸರ್ಕಾರಿ ಜಮೀನು ಸಿಕ್ಕುತ್ತಾ ಇತ್ತು. ಕಳ್ಳಂಬೆಳ್ಳದಲ್ಲಿ ಸಿಗುವುದು ಕಷ್ಟ ಎನ್ನತಕ್ಕಂಥ ಒಂದು ಭಾವನೆಯಿಂದ ನಾನು ಅದನ್ನು ಬ್ರಹ್ಮಸಂದ್ರ ಗೇಟಿಗೆ ಬೇಕು ಎಂದು ಹೇಳಿದೆ. ಈಗ ಕಳ್ಳಂಬೆಳ್ಳದಲ್ಲಿ ನೀವು ಮಾಡೋದಾದರೆ ಖಂಡಿತವಾಗಿ ನನ್ನ ಆಭ್ಯಂತರವಿಲ್ಲ. ಅದನ್ನು ಕಳ್ಳಂಬೆಳ್ಳದಲ್ಲಿ ಸ್ಥಾಪನೆ ಮಾಡಿ ಅದರೆ ನಾನು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ಮನವಿಯನ್ನು ಸಲ್ಲಿಸಿರತಕ್ಕಂಥಾದ್ದು ಕಳ್ಳಂಬೆಳ್ಳ ಮತ್ತು ಬೆಳಗಾವಿ ಜಾಗದಲ್ಲಿ ಬರತಕ್ಕಂಥಾದ್ದರಲ್ಲಿ ಅಲ್ಲಿ ಸಾಕಷ್ಟು ಜನ ಅಡಿಕೆ ಬೆಳೆಯತಕ್ಕಂಥಾವರು. ಆ ಅಡಿಕೆಯನ್ನು ತೆಗೆದುಕೊಂಡು ಎಲ್ಲಿ ಹೋಗುತ್ತಾರೆಂದರೆ ಚಿತ್ರದುರ್ಗ, ಸಭಾಧ್ಯಕ್ಷಣಿಯವರ ಕ್ಷೇತ್ರಕ್ಕೆ ಹೋಗಬೇಕಾಗುತ್ತದೆ. ಅಂದರೆ ಭೀಮಸಮುದ್ರಕ್ಕೆ ಹೋಗಬೇಕಾಗುತ್ತದೆ, ಇಲ್ಲ ಶಿವಮೊಗ್ಗಕ್ಕೆ ಹೋಗಬೇಕಾಗುತ್ತದೆ. ಅಲ್ಲಿ ಅಡಿಕೆಯ ಮಾರ್ಕೆಟ್‌ನ್ನು ಮಾಡುವುದಕ್ಕೆ ಒಳ್ಳೆಯ ಜಾಗ ಆಗುತ್ತದೆ. ಅದಕ್ಕೋಸ್ಕರ ತ್ವರಿತವಾಗಿ ಕೆಲವೇ ದಿವಸದಲ್ಲಿ ನೀವು ಕಾರ್ಯಕ್ರಮವನ್ನು ಹಾಕಿಕೊಂಡು ಕಳ್ಳಂಬೆಳ್ಳದಲ್ಲಿ ಸ್ಥಾಪನೆ ಮಾಡುತ್ತೀರಿ ಎನ್ನತಕ್ಕಂಥ ಆಶ್ವಾಸನೆಯನ್ನು ತಾವು ದಯವಿಟ್ಟು ಈ ಸದನದಲ್ಲಿ ಕೊಡಬೇಕಾತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಾವು ಸರ್ವೆ ರಿಪೋರ್ಟ್ ತರಿಸಿಕೊಂಡೆ ಈ ಮಾತನ್ನು ಹೇಳುತ್ತಿದ್ದೇವೆ. ತಾವು ಕೇಳಿದ್ದುದು ಬೇರೆ ಜಾಗ ಇದ್ದರೂ ಕೂಡ ಈ ಜಾಗದಲ್ಲಿ ಸೂಕ್ತ ಇದೆ ಎಂತ ಅನ್ನತಕ್ಕಂಥಾದ್ದನ್ನು ನಾನೇ ಹೇಳುತ್ತಿದ್ದೇನೆ. ಆದರೆ ದಯವಿಟ್ಟು ತಾವು ಕೂಡ ಅಲ್ಲಿ ಸ್ವಲ್ಪ ಜಮೀನು ಕೊಡಿಸಿಕೊಟ್ಟರೆ ಅದಷ್ಟುಬೇಗನೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆ. ಏಕೆಂದರೆ ನಾವು ಲ್ಯಾಂಡ್ ಅಕ್ವಿಸಿಷನ್‌ಗೆ ಹೋದರೆ ಸ್ವೇ ತರುವುದು, ಅದು

ಮಾಡೋದು, ಇಂಥದ್ದೆಲ್ಲಾ ಕೂಡ ಇರುತ್ತದೆ. ಅದಕ್ಕಾಗಿ ಅಲ್ಲಿ ಯಾವುದೇ ಒಂದು ಪ್ರೈವೇಟ್ ಲ್ಯಾಂಡ್ ಆಗಲಿ ಅಥವಾ ದಾನಿಗಳು ಮುಂದು ಬಂದರೆ....

ಶ್ರೀ ಟಿ.ಬಿ. ಜಯಚಂದ್ರ : ಲ್ಯಾಂಡನ್ನು ಹದಿನೈದು ದಿವಸದಲ್ಲಿ ಕೊಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಸ್ವಲ್ಪ ರೀಸನೆಬಲ್ ರೇಟ್‌ನಲ್ಲಿ ಕೊಡಿಸಿದರೆ ನಾವು ಅದನ್ನು ಈಗಾಗಲೇ ಹೇಳಿದ ಹಾಗೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ರಾಜ್ಯದಲ್ಲಿ ತಂಬಾಕು ಬೆಳೆಗಾರರಿಗೆ ಉಂಟಾಗಿರುವ ತೊಂದರೆ

641 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ತಂಬಾಕು ಬೆಳೆಗಾರರಿಗೆ ಆಗಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಪರಿಹಾರಕ್ಕಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಹೌದು.

ಭಾರತ ಸರ್ಕಾರದ ತಂಬಾಕು ಮಂಡಲಿಯು ದೇಶದಲ್ಲಿ ವಿ.ಎಫ್.ಸಿ. ತಂಬಾಕು ಬೆಳೆಯ ಉತ್ಪಾದನೆ ಮತ್ತು ಮಾರುಕಟ್ಟೆಯನ್ನು ವ್ಯವಸ್ಥಿತ ರೀತಿಯಲ್ಲಿ ನಿಯಂತ್ರಿಸುತ್ತದೆ. 1992-93ನೇ ಸಾಲಿನಲ್ಲಿ 21 ಮಿಲಿಯನ್ ಕೆ.ಜಿ. ತಂಬಾಕು ಬೆಳೆಯ ಉತ್ಪಾದನೆಯನ್ನು ನಿರೀಕ್ಷಿಸಲಾಗಿತ್ತು. ಆದರೆ ಈ ವರ್ಷದಲ್ಲಿ 28.42 ಮಿಲಿಯನ್ ಕೆ.ಜಿ ಉತ್ಪಾದನೆಯಾಗಿರುತ್ತದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ತಂಬಾಕು ಬೇಡಿಕೆ ಕುಸಿದಿರುತ್ತದೆ. ಅತಿಯಾದ ಮಳೆಯ ಕಾರಣದಿಂದ ಗುಣಮಟ್ಟ ಕಡಿಮೆಯಾಗಿದ್ದು ಹಾಗೂ ಹೆಚ್ಚುವರಿ ತಂಬಾಕು ಉತ್ಪಾದನೆಯ ಪ್ರಯುಕ್ತ ತಂಬಾಕು ಬೆಳೆಯು ಹಿಂದಿನ ಸರಾಸರಿ ಬೆಲೆ ಪ್ರತಿ ಕೆ.ಜಿ.ಗೆ 42.12 ರೂ. ಇದ್ದದ್ದು ಈ ವರ್ಷದಲ್ಲಿ ಪ್ರತಿ ಕೆ.ಜಿ.ಗೆ 25-00 ರೂ.ಗಳಿಗೆ ಇಳಿದಿರುತ್ತದೆ.

ಈ ಮೇಲ್ಕಂಡ ತೊಂದರೆಯನ್ನು ಕರ್ನಾಟಕ ಸರ್ಕಾರವು ಗಮನಿಸಿ ತಂಬಾಕು ಬೆಳೆಯುವ ಕ್ಷೇತ್ರದ ಶಾಸಕರ ಮತ್ತು ರೈತರ ಪ್ರತಿನಿಧಿಗಳ ಸಭೆಯನ್ನು ದಿನಾಂಕ 10-11-1992ರಂದು ಕರೆದು, ತಂಬಾಕು ಬೆಳೆಗಾರರ ತೊಂದರೆಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು. ಇದರ ಬಗ್ಗೆ ಮಾನ್ಯ ಶ್ರೀ ಸಾಲೋಮಾನ್ ಖುರ್ಷಿದ್, ವಾಣಿಜ್ಯ ಮಂತ್ರಿಗಳು ಇವರಿಗೆ ಪತ್ರವನ್ನು ಬರೆದು ಮೇಲ್ಕಂಡ ತೊಂದರೆಗಳನ್ನು ಸರಿಪಡಿಸಿ ರೈತರಿಗೆ ಹೆಚ್ಚಿನ ಬೆಲೆಯನ್ನು ನೀಡುವಂತೆ ತಂಬಾಕು ಮಂಡಳಿಗೆ ತಿಳುವಳಿಕೆ ನೀಡಬೇಕೆಂದು ವಿನಂತಿಸಿಕೊಳ್ಳಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆಯವರೇ, ಈ ವರ್ಷ ನಮ್ಮ ರಾಜ್ಯದಲ್ಲಿ ತಂಬಾಕು ಬೆಳೆಗಾರರಿಗೆ ಬಹಳ ತೊಂದರೆ ಆಗಿದೆ. ಸರ್ಕಾರದವರು ಬಹಳ ಸುಲಭವಾಗಿ ಕೇಂದ್ರದ ಮಂತ್ರಿಗಳಿಗೆ ಒಂದು ಪತ್ರ ಬರೆದಿದ್ದೇವೆ ಎಂದು ಹೇಳಿ ಅವರು ಜವಾಬ್ದಾರಿಯಿಂದ ಇಷ್ಟೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಈಗ ತಮಗೆ ಗೊತ್ತಿರುವ ಹಾಗೆ ಈ ವರ್ಷ ಆವರೇಜ್, ಕಳೆದ ವರ್ಷ 42-45 ರೂಪಾಯಿ ಇದ್ದಿದ್ದು ಈ ವರ್ಷ 18 ರೂಪಾಯಿಗೆ ಕೆ.ಜಿ. ಆಗಿದೆ.